## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 640/2023

**ಸಾಕ್ಷಿಯನ್ನು ದಿಃ 22.04.2026 ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ.JMS ಪರ ku.AP ವಕೀಲರಿಂದಃ**

ನಾನು ಈಗಲೂ ಕೂಡ ಹನಗೋಡು ಮತ್ತು ಹುಣಸೂರು ಕಾಲೇಜಿನಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡುತ್ತಿದ್ದೇನೆ. ನನಗೆ ಅದರಿಂದ ತಿಂಗಳಿಗೆ ರೂ. 39 ಸಾವಿರ ಸಂಬಳ ಬರುತ್ತದೆ. ಆ ಬಗ್ಗೆ ದಾಖಲೆ ಇದೆಯೇ ಎಂದರೆ ಗೆಸ್ಟ್ ಲೆಕ್ಚರರ್ ಆಗಿರುವ ಕಾರಣ ಪೇಸ್ಲಿಪ್ ಕೊಡುವುದಿಲ್ಲ. ಆ ಬಗ್ಗೆ ಸ್ಯಾಲರಿ ಬಿಲ್ ಬೇಕಾದರೆ ಹಾಜರುಪಡಿಸುತ್ತೇನೆ. ನಮ್ಮ ಮನೆಯಲ್ಲಿ ಒಟ್ಟು 3 ಜನ ಇದ್ದೇವೆ. ನನಗೆ ಒಬ್ಬ ಮಗ ಇದ್ದಾನೆ. ಆತ ಖಾಸಗಿ ಶಾಲೆಯಲ್ಲಿ 6ನೇ ತರಗತಿ ಓದುತ್ತಿದ್ದಾನೆ. ಅವನ ವಿದ್ಯಾಭ್ಯಾಸಕ್ಕೆ ವಾರ್ಷಿಕ ರೂ.35 ಸಾವಿರ ಶಾಲಾ ಶುಲ್ಕ ಕಟ್ಟುತ್ತೇನೆ. ನಾವು ಪ್ರತ್ಯೇಕವಾಗಿ ಇದ್ದೇವೆ. ನನ್ನ ಕುಟುಂಬಕ್ಕೆ BPL ಪಡಿತರ ಚೀಟಿ ಹೊಂದಿದ್ದೇನೆ. BPL ಪಡಿತರ ಚೀಟಿ ಮತ್ತು APL ಪಡಿತರ ಚೀಟಿ ಯಾರಿಗೆ ಕೊಡುತ್ತಾರೆ ಎಂದರೆ ಸಣ್ಣ ಹಿಡುವಳಿದಾರರಿಗೆ BPL ಪಡಿತರ ಚೀಟಿ ಮತ್ತು ದೊಡ್ಡ ಹಿಡುವಳಿದಾರರಿಗೆ APL ಪಡಿತರ ಚೀಟಿ ಕೊಡುತ್ತಾರೆ. ನನ್ನ ತಿಂಗಳಿನ ಕುಟುಂಬ ನಿರ್ವಹಣೆಗೆ ರೂ.7 ಸಾವಿರದಿಂದ 8 ಸಾವಿರ ಬೇಕಾಗುತ್ತದೆ.

ಆರೋಪಿಗೆ ಕೊಟ್ಟಿದ್ದೀರಿ ಎನ್ನುವ ರೂ. 180000/- ಯಾವ ಮೂಲದಿಂದ ಬಂತು ಎಂದರೆ ನನಗೆ ಜಮೀನು ಇದ್ದು, ಅದರಲ್ಲಿ ಶುಂಠಿ ಬೆಳೆದಿದ್ದು, ಅದರ ಮಾರಾಟದಿಂದ ಬಂದಿತ್ತು. ನನಗೆ ಜಮೀನು 2022-2023ರಲ್ಲಿ ಬಂದಿತ್ತು. 2019ರಲ್ಲಿ ದಾನಪತ್ರದಲ್ಲಿ ಒಂದು ಎಕರೆ ಬಂದಿತ್ತು. ಪ್ರತಿವರ್ಷ ನನ್ನ ಜಮೀನಿನಲ್ಲಿ ಶುಂಠಿ ಅಡಿಕೆ, ತೆಂಗು ಬೆಳೆಯುತ್ತೇನೆ. ಆ ಬಗ್ಗೆ ದಾಖಲೆ ಇದೆಯೇ ಎಂದರೆ ಇಲ್ಲ, ಪ್ರತಿವರ್ಷ ಬದಲಾವಣೆಯಾಗುತ್ತದೆ. ತಂಬಾಕು ಬೆಳೆಯುವ ಬಗ್ಗೆ ಲೈಸೆನ್ಸ್ ಹಾಜರುಪಡಿಸಲು ತೊಂದರೆ ಇದೆಯೇ ಎಂದರೆ ತೊಂದರೆ ಇಲ್ಲ ಲೈಸೆನ್ಸ್ ನನ್ನ ತಂದೆಯ ಹೆಸರಿನಲ್ಲಿದೆ. ನಾನು ಹಾಜರುಪಡಿಸಿದ ಪಹಣಿಗಳಲ್ಲಿರುವ ಜಮೀನಿನ ಮೇಲೆ ಸಾಲ ಪಡೆದುಕೊಂಡಿದ್ದೇನೆ. SBI ಬ್ಯಾಂಕ್ ನಿಂದ ರೂ. 5 ಲಕ್ಷ ಸಾಲ ಪಡೆದಿದ್ದೇನೆ. ರೂ.668000/- ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಬಡ್ಡಿ ಸೇರಿಸಿ ಅಷ್ಟಾಗಿದೆ. ನಾನೇ

ಸಾಲಗಾರನಾಗಿರುವ ಕಾರಣ ಆರೋಪಿಗೆ ಯಾವುದೇ ಸಾಲ ನೀಡಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು, ನಾನು ಇತ್ತೀಚೆಗೆ ಬ್ಯಾಂಕ್ ನಿಂದ ಸಾಲ ಪಡೆದುಕೊಂಡಿದ್ದೇನೆ ಎಂದು ನುಡಿಯುತ್ತಾರೆ.

ನಾನು ಇದೇ ನ್ಯಾಯಾಲಯದಲ್ಲಿ ಎರಡು ಚೆಕ್ ನ ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿ. ಆ ಬಗ್ಗೆ ದಾಖಲೆ ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿದ್ದೇನೆ. ಅದರ ಸಂಖ್ಯೆ ಗೊತ್ತೇ ಎಂದರೆ ಮರೆತು ಹೋಗಿದೆ. ನಾನು ಸಿಸಿ ನಂ. 13/2026 ಅನ್ನು ರೂ.7,50,000/- ಮತ್ತು ಸಿಸಿ ನಂ. 6/2026 ಅನ್ನು ರೂ.1,50,000/- ದಾಖಲಿಸಿದ್ದೇನೆ ಎಂದರೆ ಸರಿ. ನಾನು ಆದಾಯ ತೆರಿಗೆ ಪಾವತಿದಾರನಲ್ಲ. 3 ಪ್ರಕರಣಗಳನ್ನು ಸೇರಿ ನಾನು ರೂ.10 ಲಕ್ಷಕ್ಕೂ ಹೆಚ್ಚು ಸಾಲ ಕೊಟ್ಟಿದೇನೆ ಎಂದು ಹೇಳುತ್ತಿದ್ದು, ಸರ್ಕಾರಕ್ಕೆ ತೆರಿಗೆ ಮೋಸ ಮಾಡಿದ್ದೇನೆ ಎಂದರೆ ಸರಿಯಲ್ಲ. ಕೃಷಿ ಆದಾಯದಿಂದ ಸಾಲ ಕೊಟ್ಟಿದ್ದೇನೆ . ನಾನು BPL ಕಾರ್ಡ್ ಹೊಂದಿದ್ದರೂ ಸಹ ಹೆಚ್ಚಿನ ಹಣಕಾಸಿನ ವ್ಯವಹಾರ ಮಾಡಿ ಸರ್ಕಾರಕ್ಕೆ ಮೋಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಗೌತಮ್ ಎಂಬ ಬಾಮೈದ ಇದ್ದಾರೆ. ಅವರನ್ನು ಈ ಕೇಸಿನಲ್ಲಿ ಸಾಕ್ಷಿಯಾಗಿ ವಿಚಾರಣೆಗೆ ಒಳಪಡಿಸಲು ತೊಂದರೆ ಇಲ್ಲ. ನಾನು ಆರೋಪಿಯೊಂದಿಗೆ ಯಾವುದೇ ರೀತಿಯ ಹಣಕಾಸಿನ ವ್ಯವಹಾರ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಕಾಲೇಜಿನಲ್ಲಿ ಗೆಸ್ಟ್ ಲೆಕ್ಚರರ್ ಆಗಿ ಕೆಲಸ ಮಾಡಿದರೆ ಸ್ಯಾಲರಿ ಸ್ಲಿಪ್ ಕಡ್ಡಾಯವಾಗಿ ಕೊಡುತ್ತಾರೆ ಎಂದರೆ ಇಲ್ಲ. ಆ ಬಗ್ಗೆ ನನ್ನ ಬ್ಯಾಂಕ್ ಖಾತೆಯ statement ಅನ್ನು ಹಾಜರುಪಡಿಸಬಲ್ಲೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ತೊಂದರೆ ಕೊಡಬೇಕೆಂದು ಉದ್ದೇಶಪೂರ್ವಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.